**ವ್ಯಾಖ್ಯಾನ**

# <u>ಮುಳ್ಳು ಕೊನೆಯ ಮೇಲೆ</u>

1. **Ref.**: Haridasa Taranga Part-2, Published by M/s. Vyaasaanandadasa Pratishtaana, Bengaluru-98, First Edition 2014, page No. 113.
2. **Author:** Pandith Dr. Chaturvedi S Vedavyasachar, Bengaluru.

**ಶ್ರೀ ಪುರಂದರ ದಾಸರ ಕೀರ್ತನೆಯ ಚಿಂತನೆ:**

ಮುಳ್ಳು ಕೊನೆಯ ಮೇಲೆ ಮೂರು ಕೆರೆಯ ಕಟ್ಟಿ ।
ಎರಡು ತುಂಬದು ಒಂದು ತುಂಬಲೇ ಇಲ್ಲ ॥

ತುಂಬಲಿಲ್ಲದ ಕೆರೆಗೆ ಬಂದರು ಮೂವರು ವಡ್ಡರು
ಇಬ್ಬರು ಕುಂಟರು ಒಬ್ಬಗೆ ಕಾಲೇ ಇಲ್ಲ ॥ 1 ॥

ಕಾಲಿಲ್ಲದ ಒಡ್ಡಗೆ ಕೊಟ್ಟರು ಮೂರು ಎಮ್ಮೆಗಳ
ಎರಡು ಬರಡು ಒಂದಕ್ಕೆ ಕರುವೇ ಇಲ್ಲ. ॥ 2 ॥

ಕರುವಿಲ್ಲದ ಎಮ್ಮೆಗೆ ಕೊಟ್ಟರು ಮೂರು ಹೊನ್ನುಗಳ
ಎರಡು ಸವಕಲು ಒಂದು ಸಲ್ಲಲೇ ಇಲ್ಲ. ॥ 3 ॥

ಸಲ್ಲದಿದ್ದ ಹೊನ್ನಿಗೆ ಬಂದರು ಮೂವರು ನೋಟಗಾರರು
ಇಬ್ಬರು ಕುರುಡರು ಒಬ್ಬಗೆ ಕಣ್ಣೆ ಇಲ್ಲ ॥ 4 ॥

ಕಣ್ಣಿಲ್ಲದ ನೋಟಗಾರರಿಗೆ ಕೊಟ್ಟರು ಮೂರು ಊರುಗಳ
ಎರಡು ಹಾಳು ಒಂದಕ್ಕೆ ಒಕ್ಕಲೇ ಇಲ್ಲ. ॥ 5 ॥

ಒಕ್ಕಲಿಲ್ಲದ ಊರಿಗೆ ಬಂದರು ಮೂವರು ಕುಂಬಾರರು
ಇಬ್ಬರು ಚೊಂಚರು ಒಬ್ಬಗೆ ಕೈಯೇ ಇಲ್ಲ. ॥ 6 ॥

ಕೈಯಿಲ್ಲದ ಕುಂಬಾರನು ಮಾಡಿದ ಮೂರು ಮಡಕೆಗಳ
ಎರಡು ಒಡಕು ಒಂದಕೆ ಬುಡವೇ ಇಲ್ಲ. ॥ 7 ॥

ಬುಡವಿಲ್ಲದ ಮಡಕೆಗೆ ಹಾಕಿದರು ಮೂರಕ್ಕಿಕಾಳ
ಎರಡು ಹಂಜಕ್ಕಿ ಒಂದು ಬೇಯಲೇ ಇಲ್ಲ. ॥ 8 ॥

ಬೇಯಲಿಲ್ಲದ ಅಕ್ಕಿಗೆ ಬಂದರು ಮೂವರು ನೆಂಟರು
ಇಬ್ಬರು ಉಣ್ಣರು ಒಬ್ಬಗೆ ಹಸಿವೆ ಇಲ್ಲ. ॥ 9 ॥

ಹಸಿವಿಲ್ಲದ ನಂಟಗೆ ಕೊಟ್ಟರು ಮೂರು ಟೊಣಪೆಗಳ
ಎರಡು ಸೊಂಕವು ಒಂದು ತಾಕಲೇ ಇಲ್ಲ. ॥ 10 ॥

ತಾಕಲಿಲ್ಲದ ಟೊಣಪೆಯ ತಾಕಿಸಿ ಸದ್ಗತಿಯ
ನೀಯಬೇಕು ಪುರಂದರವಿಠಲ ನೀನು ॥ 11 ॥

**ಮುಳ್ಳು ಕೊನೆಯ ಮೇಲೆ ಮೂರು ಕೆರೆ :–** ಮುಳ್ಳಿನ ತುದಿಯಷ್ಟು ಸೂಕ್ಷ್ಮವಾದ ಕಾಲದಲ್ಲಿರಬಹುದಾದ ಮುಳ್ಳಿನ ತುದಿಯಷ್ಟು ಸೂಕ್ಷ್ಮವಾದ ಸ್ವರೂಪದೇಹವೆಂಬ ದೇಹವಿದೆ. ಕುದುರೆಯ ಬಾಲವನ್ನು ಹತ್ತು ಸಾವಿರ ಭಾಗ ಮಾಡಿದರೆ ಎಷ್ಟು ಸೂಕ್ಷ್ಮವೊ ಅಷ್ಟು ಸೂಕ್ಷ್ಮ

ಈ ಜೀವ. ಈ ಸ್ವರೂಪದೇಹದ ಮೇಲೆ ಲಿಂಗದೇಹ, ಅನಿರುದ್ಧದೇಹ, ಸ್ಥೂಲದೇಹ ಎಂಬ ಮೂರು ದೇಹಗಳಿವೆ. ಈ ದೇಹಗಳು ಆವರಕದಂತಿದ್ದು, ಜೀವಿಯ ಸ್ವರೂಪವನ್ನು ಆಚ್ಛಾದಿಸಿವೆ.

ಈ ಮೂರು ದೇಹಗಳನ್ನು ಕೆರೆಯೆಂದು ರೂಪಿಸಲಾಗಿದೆ. ಕೆರೆಯನ್ನು ಕಟ್ಟಿಸುವುದು ಜಲಸಂಗ್ರಹ ಮಾಡಿ ಸ್ನಾನಪಾನಾದಿಗಳಿಗೆ ಅನುಕೂಲವಾಗಲೆಂದು ಮಳೆಯ ಮೂಲಕ ನೀರು ಬಿದ್ದರೆ ಕೆರೆಯನ್ನು ಕಟ್ಟಿದ್ದು ಸಾರ್ಥಕವಾದೀತು. ಆದರೆ, ಈ ಮೇಲೆ ಹೇಳಿದ ಕೆರೆಗಳಲ್ಲಿ ಕರ್ಮಗಳೆಂಬ ನೀರು ಬೀಳದೆ, ಎರಡು ಬರಿದಾಗಿವೆ. ಮತ್ತೊಂದು ತುಂಬಲೇ ಇಲ್ಲ.

ಲಿಂಗದೇಹ ಮತ್ತು ಅನಿರುದ್ಧ ದೇಹಗಳೆಂಬ ಕೆರೆಗಳಲ್ಲಿ ನೀರು ಬರಲು ಸಾಧ್ಯವೇ ಇಲ್ಲ, ಕರ್ಮವೆಂಬ ನೀರು ತುಂಬಲು ಸಾಧ್ಯವಿಲ್ಲ. ಆ ದೇಹಗಳಿಂದ ಕರ್ಮ–ಧರ್ಮಗಳ ಸಾಧನೆ ಮಾಡಲಾಗುವುದಿಲ್ಲ. ಉಳಿದ ಸ್ಥೂಲದೇಹದಿಂದ ಮಾತ್ರ ಸಾಧನೆ ಸಾಧ್ಯ. ತುಂಬಬಹುದಾದ ಕೆರೆಯು. ಆದರೆ, ಅಜ್ಞಾನದಿಂದ ಸಂಸಾರದಲ್ಲಿ ಮುಳುಗಿ ಸಂಧ್ಯಾವಂದ್ಯನಾದಿ ಸಾಧನೆಗಳಿಂದ ತುಂಬಿಸಿಲ್ಲ. ಆದ್ದರಿಂದ, ತುಂಬಲು ಸಾಧ್ಯವಿರುವ ಸ್ಥೂಲದೇಹವೆಂಬ ಕೆರೆಯೂ ತುಂಬಿಲ್ಲ ಎಂಬ ಚಿಂತೆ ದಾಸರದು.

**ತುಂಬಲಿಲ್ಲದ ಕೆರೆಗೆ ಮೂವರು ಒಡ್ಡರು ಬಂದರು:–** ಒಡ್ಡರೆಂದರೆ ಕಲ್ಲುಕುಟಿಗರು. ಕಷ್ಟಪಟ್ಟು ದುಡಿದು ಜೀವಿಸುವವರು. ಒಡ್ಡರಾದರೂ ಮಳೆ, ಬಿಸಿಲು, ಗಾಳಿ, ಎನ್ನದೆ ದುಡಿಯುವರು. ಓರೆ ಕೋರೆಯಿರುವ ಕಲ್ಲನ್ನು ಸರಿ ಮಾಡುವವರು.

ಈ ಸ್ಥೂಲದೇಹವೆಂಬ ಕರೆಯ ಕಲ್ಲುಗಳನ್ನು ಕುಟ್ಟಿ ಸರಿಯಾಗಿ ಆಕಾರ ನೀಡಲು ಬಂದ ಮುವ್ವರು ಒಡ್ಡರೆಂದರೆ ಬಾಲ್ಯಾವಸ್ಥೆ, ಯೌವನಾವಸ್ಥೆ, ವೃದ್ಧಾಪ್ಯ.

ಸ್ಥೂಲದೇಹವು ಬಾಲ್ಯಾವಸ್ಥೆಯಲ್ಲಿರುವಾಗಲೂ ಸಾಧನೆಯನ್ನು ಮಾಡಬಹುದು. ಧ್ರುವ ಪ್ರಹ್ಲಾದಾದಿಗಳು ಮಾಡಿಯೂ ಇದ್ದಾರೆ.

**"ಕೌಮಾರ ಆಚರೇತ್ ಪ್ರಾಜ್ಞಃ"** ಎಂದು ಪ್ರಹ್ಲಾದೋಕ್ತಿ ಅದೇ ಹಿತೋಕ್ತಿ ವೃದ್ಧಾಪ್ಯದಲ್ಲೂ ಸಾಧನೆ ತಕ್ಕಮಟ್ಟಿಗೆ ಮಾಡಬಹುದು. ಯೌವ್ವನದಲ್ಲಂತೂ ಜ್ಞಾನ, ಶಕ್ತಿಗಳಿರುವುದರಿಂದ, ಸಾಧನೆಗೆ ಉಪಯುಕ್ತವಾದ ಕಾಲವೆನಿಸಿದೆ. ಒಡ್ಡರಂತೆ ಗಾಳಿ ಬಿಸಿಲುಗಳಿಗೆ ಹೆದರದೆ ಸಾಧನೆ ಮಾಡಬೇಕು.

**ಇಬ್ಬರು ಕುಂಟರು ಒಬ್ಬಗೆ ಕಾಲೇ ಇಲ್ಲ :–** ಆದರೆ ಬಾಲ್ಯ ಮತ್ತು ವೃದ್ಧಾಪ್ಯವೆಂಬ ಒಡ್ಡರು ಕುಂಟರಾಗಿರುವರು. ಸರಿಯಾಗಿ ಸಾಧನ ಪಥದಲ್ಲಿ ಚಲಿಸದ ಅಶಕ್ತರು. ಬಾಲ್ಯದಲ್ಲಿ ಅಜ್ಞಾನ, ವೃದ್ಧಾಪ್ಯದಲ್ಲಿ ಶಕ್ತಿಹೀನತೆಯಿಂದ ಸಾಧನೆ ಕುಂಟುಮಾರ್ಗದಲ್ಲಿ ನಡೆದಿದೆ. ಭಕ್ತಿಯಿಂದಲ್ಲದೆ, ಹಿರಿಯರ ಹಾಗೂ ಯಮನ ಭಯದಿಂದ ನಡೆದಿದೆ ಇದು. ಕಾಲಿದ್ದೂ ನಡೆಯದ ಹೆಳವನಂತಿದೆ. ಯೌವನಾವಸ್ಥೆಯ ಒಡ್ಡನಾದರೂ ಕಾರ್ಯವನ್ನು ಮಾಡಲು ಸಮರ್ಥನಿರುವನು. ಆದರೆ, ತನ್ನ ಸಾಮರ್ಥ್ಯವೆಲ್ಲವನ್ನೂ ಅನ್ಯತ್ರ ಉಪಯೋಗಿಸುವನೇ ವಿನಹ ಆಧ್ಯಾತ್ಮಿಕ ವಿಷಯಗಳ ಬಗ್ಗೆ ಒಲವಿಲ್ಲದವನಾಗಿರುವನು. ಆಧ್ಯಾತ್ಮಿಕ ವಿಷಯಗಳ ಕಡೆ ಕಾಲೇ ಹಾಕದೇ, ಕಾಲು ಇದ್ದರೂ ಇಲ್ಲದಂತೆ ಜೀವನವನ್ನು ನಡೆಸುತ್ತಿರುವನು.

**ಕಾಲಿಲ್ಲದ ಒಡ್ಡಗೆ ಕೊಟ್ಟರು ಮೂರು ಎಮ್ಮೆಗಳ :–** ಯೌವನಾವಸ್ಥೆಯಲ್ಲಿರುವ ಕಾಲಿಲ್ಲದ ಒಡ್ಡಗೆ, ಹೆಂಡತಿ, ಪುತ್ರ, ವಿತ್ತ ಎಂಬ ಮೂರು ಎಮ್ಮೆಗಳನ್ನು ನೀಡಿದರು. ಈ ಎಮ್ಮೆಗಳಿಂದ ಗಟ್ಟಿಯಾದ ಸುಖವೆಂಬ ಹಾಲನ್ನು ಪಡೆಯಬಹುದು. ಇದನ್ನೇ **"ಈಷಣಾ ತ್ರಯ",** ಎಂದಿದೆ ಉಪನಿಷತ್ತು.

'ಈಷಣಾತ್ರಯ'ಗಳಲ್ಲಿ ಮೂರನ್ನೂ ಧರ್ಮಾದಿ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಬಹುದು. ಆದರೆ, ಧರ್ಮಾದಿಗಳನ್ನು ಮಾಡಲಾಗಲಿಲ್ಲ. ವೈಷಯಿಕ

ಸುಖಗಳನ್ನು ಪಡೆಯುವುದರಲ್ಲೇ ಯಮನ ಆಗಮನವಾಯಿತು. ಎಮ್ಮೆಯ ಹಾಲು ಗಟ್ಟಿಯಾಗಿದ್ದರೂ, ಭಗವಂತನ ಅಭಿಷೇಕಾದಿಗಳಿಗೆ ಅನುಪಯುಕ್ತವಾದಂತಾಯಿತು. ಹೆಂಡತಿ ಮತ್ತು ಪುತ್ರರೆಂಬ ಎಮ್ಮೆಗಳಿಂದ ಅಲ್ಪಸ್ವಲ್ಪ ಧರ್ಮಾದಿಗಳು ನಡೆದರೂ ಮೋಕ್ಷ ಹೊಂದುವಂತಹ ಕಾರ್ಯವು ನಡೆಯಲಿಲ್ಲ. ಎಮ್ಮೆಯ ಹಾಲಿನ ಸೇವನೆಯಿಂದ ಬುದ್ಧಿ ಮಂಕಾದಂತೆ. ಇವರಿಂದಲೂ ಬುದ್ಧಿ ಮಂಕಾಯಿತು. ಸಾಧನೆ ಶೂನ್ಯ. ಎರಡೂ ಬರಡಾಗಿವೆ.

**ಎರಡು ಬರಡು ಒಂದಕ್ಕೆ ಕರುವೆ ಇಲ್ಲ:–** ಹಿಂದೆ ಹೇಳಿದ ಸುಖವೆಂಬ ಪುತ್ರೇಷಣ ಹಾಗೂ ಧಾರೇಷಣ ಹಾಲು ನೀಡಿದರೂ, ಮೋಕ್ಷೋಪಯೋಗಿಯಾದ ಹಾಲು ನೀಡಲಿಲ್ಲ. ಎಂದೇ ಬರಡು = ಗೊಡ್ಡು ಎಮ್ಮೆ ಎನಿಸಿವೆ. **"ವಿತ್ತೇಷಣ"**ವೇ ಮೂರನೇ ಎಮ್ಮೆ. ಹಣದಿಂದ ಬೇಕಾವಷ್ಟು ದಾನ ಧರ್ಮಾದಿಗಳನ್ನು ಮಾಡಿ ಮೋಕ್ಷೋಪಯೋಗಿಯಾದ ಶುದ್ಧ ಹಾಲನ್ನೇ ಪಡೆಯಬಹುದು. ಆದರೆ, ವಿತ್ತವನ್ನು ಪರಲೋಕಕ್ಕಾಗಿ ವಿನಿಯೋಗ ಮಾಡಲಾಗದೆ. ಪರರಿಗಾಗಿ ವಿನಿಯೋಗಿಸಲಾಗುತ್ತಿದ್ದು, ಕರುವನ್ನು ಹಾಕಿದರೂ ಕರುವನ್ನು ಕಳೆದುಕೊಂಡ ಎಮ್ಮೆಯಂತೆ ನಿಷ್ಫಲವಾಗಿದೆ. ಕರುವು ಬದುಕಿರದೆ ಹಾಲನ್ನು ಉಪಯೋಗಿಸಬಾರದು ಎಂದೇ ಶಾಸ್ತ್ರಮರ್ಯಾದೆ.

**ಕರುವೇ ಇಲ್ಲದ ಎಮ್ಮೆಗೆ ಮೂರು ಹೊನ್ನುಗಳ ಕೊಟ್ಟರು :–** ಕರುವೇ ಇಲ್ಲದ ಎಮ್ಮೆಗೆ ಎಷ್ಟು ಬೆಲೆ ಮೂರು ಕಾಸು ಬೆಲೆ ತಾನೆ ? ಮೂರು ಹೊನ್ನು ನೀಡಿರುವರು.

ಈ ವಿತ್ತೇಷಣವೆಂಬ ಕರುವಿಲ್ಲದ ಎಮ್ಮೆಗೆ "ದಾನ, ಭೋಗ, ನಾಶ"ವೆಂಬ ಮೂರು ಹೊನ್ನನ್ನು ನೀಡಿದ್ದಾರೆ.

"ದಾನಂ ಭೋಗೋ ನಾಶಸ್ತ್ರಿಸ್ರಃ ಗತಯೋ ಭವಂತಿ ವಿತ್ತಸ್ಯ" ಎಂಬ ಚಿನ್ನದಂಥಹ ಮಾತೇ ಸಾಕ್ಷಿಯಾಗಿದೆ.

ವಿತ್ತದಿಂದ ಮಾಡಬಹುದಾದ ಕಾರ್ಯಗಳೆಂದರೆ, ತಾನೂ ಭೋಗಿಸುವುದು, ದಾನ ಮಾಡುವುದು, ಅವೆರಡೂ ಇಲ್ಲದಿದ್ದರೆ ನಾಶ.

ಇವುಗಳಲ್ಲಿ ತಾನು ಮಾಡಿದ ಭೋಗದಿಂದಾಗಲೀ, ಪರರು ಅಪಹರಿಸಿದ್ದರಿಂದಾಗಲೀ, ಪರಲೋಕ ಸಾಧನೆಯಾಗದು. ಇದು "ಸವಕಲು ನಾಣ್ಯ". ಬೆಲೆ ಇಳಿದು ಹೋದ ನಾಣ್ಯವೆನಿಸಿದೆ.

ದಾನಕ್ಕೆ ಬೆಲೆಯಿದೆ ದಾನವನ್ನು ಮಾಡಲು ಮನಸ್ಸಿಲ್ಲ. ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಕೊಡಲು ಮನಸ್ಸಾದರೂ ಹೇಗೆ ಬಂದೀತು ? ಹೀಗಾಗಿ ದಾನವೆಂಬ ಹೊನ್ನು ಸಲ್ಲದಂತಹ ನಾಣ್ಯವೆನಿಸಿದೆ.

**ಸಲ್ಲದಿದ್ದ ಹೊನ್ನಿಗೆ ಮೂವರು ನೋಟಗಾರರು ಬಂದರು :–** ತುಂಬದ ಕೆರೆಗೆ ಸರಿಮಾಡಲೆಂದು ಬಂದ ಮೂವರು ಒಡ್ಡರಲ್ಲಿ ಕಾಲೇ ಇಲ್ಲದ ಒಡನಿಗೆ ನೀಡಿದ ಕರುವೇ ಇಲ್ಲದ ಎಮ್ಮೆಗೆ ನೀಡಿದ ಮೂರು ನಾಣ್ಯಗಳಲ್ಲಿ ಸಲ್ಲದ ನಾಣ್ಯವೆನಿಸಿದ ದಾನಕ್ಕೆ ಸಂಚಿತ. ಪ್ರಾರಬ್ಧ. ಆಗಾಮಿ ಎಂಬ ಮೂವರು ನೋಟಗಾರರು ಬಂದರು. ನೋಟಗಾರರೆಂದರೆ ಯೋಗ್ಯವಾದ ಕಾಲವನ್ನು ನಿರೀಕ್ಷಿಸಿ ಫಲ ಕೊಡುವವರು. ಇವುಗಳಲ್ಲಿ ಹಿಂದೆ ಸಂಪಾದಿಸಿ ಇಟ್ಟ ಸಂಚಿತ ಹಾಗೂ ಮುಂದೆ ಮಾಡಬಹುದಾದ ಆಗಾಮಿ ಕರ್ಮಗಳು ನಮಗೆ ನೋಡಲು ಸಿಗಲಾರದೆಂದೇ "ಕುರುಡರೆನಿಸಿವೆ".

ಪ್ರಾರಬ್ಧ ಕರ್ಮವಾದರೂ ಆ ಕರ್ಮದ ಫಲವಾದ ಸುಖ–ದುಃಖಾದಿಗಳು ಅನುಭವಕ್ಕೆ ಬರುವುದರಿಂದ ತಿಳಿಯಬಹುದು. ಆದರೆ ವಿಷಯ ಸುಖದಲ್ಲಿ ಮುಳುಗಿ, ಇದು ಪ್ರಾಚೀನ ಕರ್ಮದ ಫಲವೆಂದು ತಿಳಿಯಲು ಸಾಧ್ಯವಾಗದೆ ಕಣ್ಣಿದ್ದೂ ಕಣ್ಣೆ ಇಲ್ಲದಂತಾಗಿದೆ.

**ಕಣ್ಣಿಲ್ಲದ ನೋಟಕಾರರಿಗೆ ಕೊಟ್ಟರು ಮೂರು ಊರುಗಳ**
**ಎರಡು ಹಾಳೂರು ಒಂದಕೆ ಒಕ್ಕಲೇ ಇಲ್ಲ.**

ಕಣ್ಣಿದ್ದೂ ಕುರುಡನಂತಾದ ಪ್ರಾರಬ್ಧ ಕರ್ಮಕ್ಕೆ ಸತ್ವ, ರಜಸ್ಸು, ತಮಸ್ಸೆಂಬ ಮೂರು ಊರುಗಳನ್ನು ನೀಡಲಾಯಿತು.

ಪ್ರಾರಬ್ಧದಲ್ಲಿ ಸಾತ್ವಿಕ ಕರ್ಮಗಳೂ, ರಾಜಸ ಕರ್ಮಗಳೂ ತಾಮಸ ಕರ್ಮಗಳೂ ಸೇರಿವೆ. ಇವುಗಳಲ್ಲಿ ರಾಜಸ ಕರ್ಮಗಳಾದರೂ ಸಂಸಾರದಲ್ಲೇ ಅಲೆಯುವಂತೆ ಮಾಡಿದರೆ, ತಾಮಸ ಕರ್ಮಗಳು ಅಧೋಲೋಕಗಳಿಗೆ ತಳ್ಳುತ್ತವೆ. ಆದ್ದರಿಂದ ಹಾಳೂರೆನಿಸಿವೆ. ಈ ಕರ್ಮಾಚರಣೆಗಳಿಂದ ಜ್ಞಾನವು ಪಕ್ವವಾಗಲಾರದು. ಸಾತ್ವಿಕ ಕರ್ಮಗಳಿಂದ ಮಾತ್ರ ಜ್ಞಾನ ಸಂಪಾದನೆ ಹಾಗೂ ಸಂಪಾದಿಸಿದ ಜ್ಞಾನದ ಪಕ್ವಾವಸ್ಥೆ ಪರಿಪಕ್ವಾವಸ್ಥೆಗೆ ತಲುಪಬಹುದು.

ಸತ್ವಕರ್ಮದಿಂದ ಜ್ಞಾನ ಸಂಪಾದನೆ ಆದಂತೆ, ಹಾಳೂರನ್ನು ಉತ್ತಿ ಬಿತ್ತಿದರೆ 'ಗೌಡ' ನಾಗಬಹುದು. ಜ್ಞಾನವನ್ನು ತನ್ನದಾಗಿಸಿಕೊಳ್ಳಬಹುದು. ಪ್ರಕೃತ ಯಜ್ಞಯಾಗಾದಿಗಳನ್ನು ಮಾಡಲು ಅವಕಾಶವಿದ್ದರೂ, ಸಾಂಸಾರಿಕ ವಿಷಯಗಳ ಬಿರುಗಾಳಿ ಹೊಡತಕ್ಕೆ ಸಿಕ್ಕಿ, ವ್ಯವಸಾಯವನ್ನು ಮಾಡಿ ಉತ್ತಲು, ಬಿತ್ತಲು ಮನುಷ್ಯನೇ ಇಲ್ಲದಂತಾಗಿ, ಒಕ್ಕಲೇ ಇಲ್ಲವಾಗಿದೆ.

**ಒಕ್ಕಲಿಲ್ಲದ ಊರಿಗೆ ಬಂದರು ಮೂವರು ಕುಂಬಾರರು**
**ಇಬ್ಬರು ಚೊಂಚರು ಒಬ್ಬಗೆ ಕೈಯೇ ಇಲ್ಲ.**

ಆ ಸತ್ವಗುಣವೆಂಬ ಊರಿಗೆ ಮೂವ್ವರು ಕುಂಬಾರರು ಬಂದರು. ಅವರೇ ಹರಿ, ಹರ, ವಿರಿಂಚಿಗಳು. ಹರಿಯು ಸ್ಥಿತಿಕರ್ತನಾಗಿದ್ದರೆ, ಬ್ರಹ್ಮನು ಸೃಷ್ಟಿಕರ್ತನು. ಹರನು ಸಂಹಾರ ಕರ್ತನೆನಿಸಿರುವನು, ಬ್ರಹ್ಮಾದಿಗಳೇ ಸೃಷ್ಟ್ಯಾದಿಕರ್ತರೆಂದು ಶಾಸ್ತ್ರಗಳು ಬಿತ್ತರಿಸಿದರೂ ಭಗವಂತನ ಅಧೀನರಾಗೇ, ಅವನ ಆಜ್ಞಾಧಾರಕರಾಗಿಯೇ, ಅವನ ಪ್ರೀತಿಗಾಗಿಯೇ

ಮಾಡುವವರು. ಸ್ವತಂತ್ರರಲ್ಲ. ಆದ್ದರಿಂದಲೇ ಚೊಂಚರು, ಕೈಯನ್ನು ಹೊಂದಿದ್ದರೂ ಕೆಲಸಕ್ಕೆ ಬಾರದಂತಾಗಿದೆ.

ಭಗವಂತನಾದರೂ ತನ್ನ ಇರುವಿಕೆ (ಸತ್ತಾ), ಜ್ಞಾನ (ಪ್ರಮಿತಿ) ಇವುಗಳಲ್ಲಿ ಸ್ವತಂತ್ರನಾಗಿರುವವನು. ಯಾರಿಗೂ ಅಧೀನನಾದವನಲ್ಲ, ಆದರೂ, ಕೈಯಿದ್ದೂ ಕೈ ಇಲ್ಲದವನಂತಾಗಿದ್ದಾನೆ. ಕಾರಣ, ಭಗವಂತನು ಜೀವನ ಅನಾದ್ಯವಿದ್ಯಾಕರ್ಮಗಳನ್ನು ಜೀವನ ಸ್ವರೂಪ ಯೋಗ್ಯತೆಯನ್ನು ಆಧರಿಸಿಯೇ. ಕರ್ಮ ಮಾಡಲು ಪ್ರೇರಿಸುವವನು.

ಈ ಹಿಂದೆ ಮಾಡಿದ ಪ್ರಾಚೀನ ಕರ್ಮದಿಂದಾಗಿ, ಭಗವಂತನು ನಮ್ಮಲ್ಲಿ ಯಾವುದೇ ರೀತಿಯ ಸಾತ್ವಿಕರೆಂಬ ಮಣ್ಣಿನಿಂದ ತಯಾರಾಗಬಹುದಾದ ಸಾತ್ವಿಕ ಕರ್ಮಗಳೆಂಬ ಮಡಕೆಗಳನ್ನು ಮಾಡುತ್ತಿಲ್ಲ ಅವನಿಗೆ ಕೈಯೇ ಬರುತ್ತಿಲ್ಲ ಕುಂಬಾರನೇ ತಿರಸ್ಕರಿಸಿದ ಮಣ್ಣಿನಂತೆ ಆಗಿದೆ ನಮ್ಮ ಸ್ಥಿತಿ.

**ಕೈಯಿಲ್ಲದೇ ಕುಂಬಾರನು ಮಾಡಿದ ಮೂರು ಮಡಕೆಗಳ**
**ಎರಡು ಒಡಕು ಒಂದಕೆ ಬುಡವೇ ಇಲ್ಲ.**

ನಮ್ಮ ವಿಷಯದಲ್ಲಿ ಕೈಬಾರದ, ಸ್ವತಂತ್ರನಾದ, ನಿಜವಾಗಿ ಜಗನ್ನಿರ್ಮಾತೃವಾದ್ದರಿಂದ ಕುಂಬಾರನೆನಿಸಿದ, ವಿಷ್ಣುವಾದರೂ ಪ್ರತಿಯೊಬ್ಬನಿಗೂ ಅವಶ್ಯ ಬೇಕೆ ಬೇಕಾದ ಜ್ಞಾನ, ಭಕ್ತಿ, ವೈರಾಗ್ಯಗಳೆಂಬ ಮೂರು ಮಡಕೆಗಳನ್ನು ಸೃಷ್ಟಿಮಾಡಿರುವನು.

ಇವುಗಳಲ್ಲಿ ಜ್ಞಾನ ಮತ್ತು ವೈರಾಗ್ಯಗಳು ಭಗವಂತನ ಅನುಗ್ರಹದಿಂದಲೇ ಬರತಕ್ಕದ್ದು. ಸ್ವತಃ ತಾನಾಗಿಯೇ ಬರಲಾರವು. ಎಂದೇ ಎರಡೂ ಒಡಕು ಮಡಕೆಯಂತಾಗಿದೆ. ಭಕ್ತಿಯೊಂದನ್ನು ಮಾಡಬಹುದಿತ್ತು. ಆದರೆ, ಸಂಸಾರದಲ್ಲಿ ಮಾಡಿದೆವೂ ಕೂಡ; ಭಗವಂತನಲ್ಲಿ ಮಾಡಲಾಗಲಿಲ್ಲ, ಜ್ಞಾನ, ಭಕ್ತಿ, ವೈರಾಗ್ಯಗಳನ್ನೂ ಮಾಡಲಾಯಿತು. ಜ್ಞಾನ

ಮತ್ತು ಭಕ್ತಿಗಳಲ್ಲಿ ವೈರಾಗ್ಯ ಸಂಪಾದಿಸಲಾಯಿತು. ಹಾಗೂ ಸಂಸಾರದಲ್ಲಿ ಜ್ಞಾನ, ಭಕ್ತಿ, ಸಂಪಾದಿಸಿದವು. ಭಗವಂತನಲ್ಲಿ ವೈರಾಗ್ಯ ಬೆಳೆಸಿಕೊಂಡೆವು ಎಂದೇ ಬುಡವೆ ಇಲ್ಲದ ಮಡಕೆಯಂತಾಗಿದೆ.

**ಬುಡವಿಲ್ಲದ ಮಡಕೆಗೆ ಹಾಕಿದರು ಮೂರಕ್ಕಿಕಾಳ**
**ಎರಡು ಹಂಜಕ್ಕಿ ಒಂದು ಬೇಯಲೇ ಇಲ್ಲ.**

ಭಕ್ತಿಯೆಂಬ ಬುಡವೇ ಇಲ್ಲದ ಮಡಕೆಯೊಳಗೆ ಅನ್ನವನ್ನು ಪಕ್ವಮಾಡು (ಬುಡವಿಲ್ಲದ ಮಡಕೆಯಲ್ಲಿ ಅನ್ನ ತಾನೇ ಹೇಗಾದೀತು) ಸಾತ್ವಿಕ ಭಕ್ತಿ, ರಾಜಸ ಭಕ್ತಿ, ತಾಮಸಭಕ್ತಿ ಎಂಬ ಮೂರಕ್ಕಿಗಳನ್ನು ಹಾಕಲಾಯಿತು. ಇವುಗಳಲ್ಲಿ ರಾಜಸ ಭಕ್ತಿಯನ್ನು ಹಾಗೂ ತಾಮಸ ಭಕ್ತಿಯನ್ನು ರಾಜಸ ದೇವತೆಗಳು ಹಾಗೂ ಉಚ್ಛಿಷ್ಟ ಗಣಪತಿ ಮುಂತಾದ ತಾಮಸ ದೇವತೆಗಳಲ್ಲಿ ಮಾಡಬಹುದಾದರೂ, ಆ ಭಕ್ತಿಯ ಫಲವಾದರೂ ಅರ್ಧ ಬೆಂದ ಅಕ್ಕಿಯಂತೆ. ತಿನ್ನುವಾಗ ಕಷ್ಟಪಟ್ಟು ತಿಂದರೂ ಹಂಜಕ್ಕಿಯಾದ್ದರಿಂದ ಮುಂದೆ ಹೊಟ್ಟೆ ನೋವು ಖಂಡಿತ. ನಂದನಂದನನಾದ ಮುಕುಂದನಿಂದ ಮಾತ್ರ ಲಭಿಸುವ ನಿತ್ಯ ಪುಮರ್ಥ ರೂಪಫಲವಾದರೂ ಸಾತ್ವಿಕ ಭಕ್ತಿ ಲಬ್ಯವಾದದ್ದು. ಆದರೆ, ಅಂಥಹ ಸಾತ್ವಿಕ ಭಕ್ತಿಯನ್ನು ಮಾಡಲಾಗದೆ ಬೇಯದಿರುವ ಅಕ್ಕಿಕಾಳಿನಂತಾಗಿದೆ. ಅವೆರಡಂತೂ ಹಂಜಕ್ಕೆಯಾಯಿತು. ಇನ್ನೊಂದನ್ನಾದರೂ ಬೇಯಿಸಿ ತಿನ್ನೋಣ ಎಂದರೆ ಅದು ಬೇಯಲೇ ಇಲ್ಲ.

**ಬೇಯಲಿಲ್ಲದ ಅಕ್ಕಿಗೆ ಬಂದರು ಮೂವರು ನೆಂಟರು**
**ಇಬ್ಬರು ಉಣ್ಣರು ಒಬ್ಬಗೆ ಹಸಿವೆ ಇಲ್ಲ.**

ಈ ಬೇಯಲು ಅಯೋಗ್ಯವಾಗಿದ್ದರೂ ಬೇಯದೆ ಅಪಕ್ವಾಗಿದ್ದ ಅಕ್ಕಿಯನ್ನು ತಿನ್ನಲು ಮುವ್ವರು ನೆಂಟರು ಬಂದರು.

ತತ್ವಾಭಿಮಾನಿಗಳು, ತಾತ್ವಿಕ ಅಸುರರಾದ ಕಾಲನೇಮಿ ಮುಂತಾದವರು ಮತ್ತು ಜೀವ, ಹೀಗೆ ಮುವ್ವರು ನೆಂಟರು. ಈ ಮುವ್ವರು ನೆಂಟರಲ್ಲಿ ಮೊದಲನೆಯ ತಾತ್ವಿಕ ದೇವತೆಗಳಿಗೆ ಹಸಿವೇ ಇಲ್ಲ. ಭಗವಂತನನ್ನು ಅಪರೋಕ್ಷೀಕರಿಸಿಕೊಂಡವರೇ ಆಗಿದ್ದು ಮುಕ್ತಪ್ರಾಯರೇ. ತಾತ್ವಿಕ ಅಸುರರಾದರೂ ಅವರ ಸ್ವರೂಪನೇ ದುಃಖ, ಅಜ್ಞಾನ ಪ್ರಾಯವಾದದ್ದು. ಅವರಿಗೂ ಈ ಜ್ಞಾನದೂಟ ಬೇಕಿಲ್ಲವಾಗಿದೆ. ಸಾತ್ವಿಕ ಭಕ್ತಿಯಂತು ಅವರ ಹತ್ತಿರ ಸುಳಿಯಲಾರದು. ನಿಜವಾಗಲೂ ತಿನ್ನಲೇ ಬೇಕಾದ ನೆಂಟನೆಂದರೆ ಜೀವಿಯೇ. ಆ ಜೀವಿಯಾದರೂ ಸಾಂಸಾರಿಕ ಸುಖದಲ್ಲಿ ಲೋಲುಪನಾಗಿ ಹಸಿವೆಯೇ ಇಲ್ಲದಂತಾಗಿದ್ದಾನೆ. ಯಾವ ನೆಂಟರು ಉಣ್ಣಬಹುದಿತ್ತೋ ಅವನಿಗೆ ಜ್ಞಾನದೂಟದಲ್ಲಿ ಅಸಡ್ಡೆ.

**ಹಸಿವೆ ಇಲ್ಲದ ನೆಂಟನಿಗೆ ಕೊಟ್ಟರು ಮೂರು ಟೊಣಪೆಗಳ**
**ಎರಡು ತಾಕದು ಒಂದು ತಾಕಲೇ ಇಲ್ಲ.**

ಹಸಿವೆ ಇಲ್ಲದ ಜೀವನೆಂಬ ನೆಂಟನಿಗೆ ಮೂರು ದಪ್ಪನಾದ ವ್ಯಕ್ತಿಗಳನ್ನು ಜ್ಞಾನವೆಂಬ ಅನ್ನಕ್ಕೆ ತಗುಲಿಸಲು ಮತ್ತು ರುಚಿ ತೋರಿಸಲೆಂದು ನೀಡಲಾಯಿತು. ಈ ಟೊಣಪೆಗಳೇ ಆಧ್ಯಾತ್ಮಿಕ, ಆದಿದೈವಿಕ, ಆದಿಭೌತಿಕ ಎಂಬ ತಾಪತ್ರಯಗಳು. ಇವುಗಳು ತಗುಲಿದಾಗ ಸ್ವಲ್ಪಕಾಲ ಮಾತ್ರ ಭಗವಂತನಲ್ಲಿ ಭಕ್ತಾದಿಗಳು ಮಾಡಲಾಗುತ್ತದೆ.

ಹಸಿವೆ ತಗಲುವಂತೆ ಮಾಡಬಲ್ಲ ದಾಂಡಿಗರಿವರು. ಆದರೆ ಆದಿಭೌತಿಕನೆಂಬ ಟೊಣಪೆಯು ನೀಡಿದ ಪ್ರಾಣಿ ಮುಂತಾದವುಗಳಿಂದಾಗುವ ತೊಂದರೆಯನ್ನು ಮನೆ ಬಾಗಿಲು ಭದ್ರ ಮಾಡಿಕೊಳ್ಳುವುದರ ಮೂಲಕ ತಾಕದಂತೆ ತಡೆಹಿಡಿದ. ಆದಿಭೌತಿಕನ ಆಟ ನಡೆಯಲಿಲ್ಲ.

ಆದಿದೈವಿಕನು ನೀಡಿದ ಅತಿವೃಷ್ಟಿ ಅನಾವೃಷ್ಟಿ ಬಿರುಗಾಳಿ ಮುಂತಾದವುಗಳು ಸ್ವಾಭಾವಿಕವೇ ಎಂದು ತಿಳಿದು, ಅವುಗಳಿಗೆ ಆದಷ್ಟು ಮಟ್ಟಿಗೆ ಪರಿಹಾರೋಪಾಯಗಳನ್ನು ಕಂಡುಹಿಡಿದಿರುವನು. ಹೀಗಾಗಿ ಆ ತಾಪವೂ ತಗಲಿ ಹಸಿವುಂಟುಮಾಡಲಿಲ್ಲ. ಈ ಇಬ್ಬರು

ಟೊಣಪೆಗಳ ಏಟು ತಾಕಲಿಲ್ಲ.  ಇನ್ನು ಶರೀರ ಸಂಬಂಧಿಯಾದ ಭಯಂಕರ ರೋಗ ರುಜಿನಗಳೆಂಬ ಆಧ್ಯಾತ್ಮಿಕ ತಾಪವುಂಟಾದಾಗ ಮಾತ್ರ ನಾರಾಯಣನೇ ರಕ್ಷಿಸು.  ನೀನೇ ನನಗೆ ಗತಿ ಎಂದು ಮುಕ್ತ ಕಂಠದಿಂದ ಕೂಗುವನು.  ಆದರೆ ಏಡಿ (ಕ್ಯಾನ್ಸರ್) ಕ್ಷೇತ್ರಿಯರೋಗ (ಏಡ್ಸ್) ಮುಂತಾದ ಭಯಂಕರ ರೋಗ ತಗುಲಿದರೂ, ನಮ್ಮ ಡಾಕ್ಟರಿದ್ದಾರೆ.  ಅವರೇ ವಾಸಿ ಮಾಡುತ್ತಾರೆ ಎನ್ನುವರೇ ಹೊರತು **"ವೈದ್ಯೋ ನಾರಾಯಣೋ ಹರಿಃ"** ಎಂಬ ಉದ್ಗಾರ ತೆಗೆಯುವವರು ವಿರಳ.  ಆದ್ದರಿಂದ ಭಗವಂತನ ವಿನಹ ಬೇರೊಬ್ಬ ವೈದ್ಯನಿಂದ ಚಿಕಿತ್ಸೆ ಮಾಡಲಾಗದ ಭಯಂಕರ ರೋಗವನ್ನು "ನನಗೆ ತಗುಲಿಸು".  ಈ ಟೊಣಪೆ ತಗುಲಿದ ಮಾತ್ರಕ್ಕೆ ಭಗವಂತನ ಪಾದದಲ್ಲಿ ಬೀಳಬೇಕು ಹಾಗೆ ಮಾಡು ಪುರಂದರವಿಠಲನೇ ಎಂದು ಸ್ತೋತ್ರ ಮಾಡುತ್ತಿರುವವರು ದಾಸರು.  ಕುಂತಿಯೂ ಕೇಳಿದ್ದು ಇದನ್ನೇ **"ವಿಪದಃ ಸಂತು ನಃ ಶಶ್ವತ್ ತತ್ರ ತತ್ರ ಜಗತ್ಪತೇ"**.

## ಶ್ರೀ ಕೃಷ್ಣಾರ್ಪಣಮಸ್ತು

**ಲೇಖಕರು:** ಪಂ॥ ಡಾ॥ ಚತುರ್ವೇದಿ ಎಸ್. ವೇದವ್ಯಾಸಾಚಾರ್ಯ, ಬೆಂಗಳೂರು (ಲೇಖಕರ ಅನುಮಾನತಿಯೊಂದಿಗೆ).